ಅಧ್ಯಕ್ಷರು.—ಈ ವಿಷಯದ ಬಗ್ಗೆಯೇ ಎಂ. ರಾವಂಪ್ಪ ಹಾಗೂ ಶ್ರೀ ಉಸ್ತಾದ್ ಅವರೂ ಕೇಳಿರುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಈ ವಿಷಯವಾಗಿ ಮೂರು ಜನರು ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿರುತ್ತಾರೆ. ಈ ಸಹಕಾರಿ ನೂಲಿನ ಗಿರಣಿ ಸರಿಯಾಗಿ ಕೆಲಸ ಮಾಡದೇ ಇದ್ದು ಇದರ ಅಧ್ಯಕ್ಷರು ರಾಜೀನಾಮೆ ಕೊಟ್ಟಿದ್ದರಿಂದ ಕಳೆದ ೩–೪ ತಿಂಗಳ ಹಿಂದೆ ಸರ್ಕಾರ ಇದನ್ನು ವಹಿಸಿಕೊಂಡಿದೆ. ಅಲ್ಲಿ ವರ್ಕಿಂಗ್ ಕ್ಯಾಪಿಟಲ್ ಇಲ್ಲ. ಹಾಗೂ ೨ ಕೋಟಿ ರೂಪಾಯಿಗಳ ಶಾರ್ಟ್ ಲೋನ್ ಕೊಡಿ ಎಂದು ಅವರು ಕೇಳಿದ್ದಾರೆ. ಹಾಗೂ ಅಲ್ಲಿ ಏನು ವ್ಯವಹಾರ ಆಗಿದೆ ಅದನ್ನು ಎನ್‌ಕ್ವಯರಿ ಮಾಡಿ ಎಂದು ನಾನು ಹೇಳಿದ್ದೇನೆ. ಈಗ ಮಾರ್ಕೆಟಿಂಗ್ ಫೆಡರೇಷನ್‌ನಿಂದ ಹತ್ತಿಯನ್ನು ಕೊಡಿಸುತ್ತೇವೆ ನೂಲು ಮಾಡಿ ೬ ತಿಂಗಳಿಗೆ ಒಂದು ಸಾರಿ ಹಣವನ್ನು ಕೊಡಿ ಎಂದು ಹೇಳಿದರೆ ಆಗುವುದಿಲ್ಲವೆಂದು ಅವರು ಹೇಳುತ್ತಿದ್ದಾರೆ. ಅವರಿಗೆ ೨ ವರ್ಷ ಸಮಯ ಬೇಕಂತೆ. ಇದನ್ನೆಲ್ಲಾ ತೀರ್ಮಾನ ಮಾಡುವುದಕ್ಕೆ ೩–೪ ದಿನಗಳಲ್ಲಿ ಸಭೆ ಕರೆಯುವುದಕ್ಕೆ ಸೂಚನೆ ಕೊಟ್ಟಿದ್ದೇನೆ. ಅಲ್ಲಿಯ ಅಪೆಕ್ಸ್ ಬ್ಯಾಂಕಿನವರು, ಆ ಕಾರ್ಖಾನೆಯ ಎಂ.ಡಿ. ಹಾಗೂ ರಿಜಿಸ್ಟ್ರಾರ್‌ರವರ ಸಭೆಯನ್ನು ಕರೆದು ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಒದಗಿಸುವುದಕ್ಕೆ ತೀರ್ಮಾನ ಮಾಡುತ್ತೇವೆ.

(ii) ವಿಜಾಪುರ ನಗರಕ್ಕೆ ಕುಡಿಯಲಂವ ನೀರಿನ ಅಭಾವ

ಶ್ರೀ ಬಿ. ಜಿ. ಜಮಖಂಡಿ.—ಮಾನ್ಯ ಅಧ್ಯಕ್ಷರೇ, ಒಂದು ಲಕ್ಷ ಜನಸಂಖ್ಯೆಯುಳ್ಳ ವಿಜಾಪುರ ನಗರದಲ್ಲಿ ಕುಡಿಯುವ ನೀರಿನ ಅಭಾವ ಅತ್ಯಂತ ತೀವ್ರವಾಗಿದೆ. ವಿಜಾಪುರ ಐತಿಹಾಸಿಕ ಪ್ರಸಿದ್ಧ ನಗರ ಆಲ್ಲಿಗೆ ಪ್ರತಿನಿತ್ಯ ರಜೆಯ ದಿವಗಳಲ್ಲಿ ಸಹಸ್ರಾರು ಜನ ಪ್ರವಾಸಿಗರು ಬರುತ್ತಾರೆ. ವಿಜಾಪುರಕ್ಕೆ ಕುಡಿಯಲಂವ ನೀರು ಪೂರೈಸುವ ಕೊರ್ಲೆಕೊಲ್ಲಾರ ಬ್ಯಾರೇಜಿನ ಗೇಟನ್ನು ಸಕಾಲದಲ್ಲಿ ಮುಚ್ಚಿದ್ದರೆ ಇಂದಿನ ದುರ್ಧರ ಸ್ಥಿತಿ ಬರುತ್ತಿರಲಿಲ್ಲ. ಓರ್ವ ಪಿ.ಡಬ್ಲ್ಯೂ.ಡಿ. ಅಧಿಕಾರಿಯಲಂ ಬೇಜವಾಬ್ದಾರಿತನದಿಂದ ಇದೆಲ್ಲಾ ಆಗಿದೆ, ಜನರು ಈಗ ನೀರಿಗಾಗಿ ಪರದಾಡುತ್ತಿದ್ದಾರೆ. ಹಿಡಕಲ್ ಜಲಾಶಯದಿಂದ ನೀರು ಬಿಟ್ಟಿದ್ದರೂ ಪ್ರಯೋಜನವಾಗಿಲ್ಲ. ನಗರದ ಹಲವಾರು ಕಡೆ ಇರುವ ಕೊಳವೆ ಬಾವಿಗಳನ್ನು ರಿಪೇರಿ ಮಾಡಿದರೆ ಏನಾದರೂ ಪ್ರಯೋಜನವಾದೀತಂ, ಅದೂ ಇಲ್ಲದಾಗಿದೆ. ಕೊಯ್ನಾದಿಂದ ನೀರು ಬಿಡುವ ಪ್ರಯತ್ನವಾದರೂ ನಡೆಯಬೇಕು, ಪ್ರತಿನಿತ್ಯ ಆಲ್ಲಿಯ ಜನರು ಬರಿಕೊಡಗಳ ಪ್ರದರ್ಶನ ನಡೆಸುತ್ತಿರುವ ವರದಿಗಳು ಬರುತ್ತಿವೆ. ಕುಡಿಯುವ ನೀರಿನ ಈ ತೀವ್ರ ಸಮಸ್ಯೆಯನ್ನು ಯುದ್ಧ ವೇಗದಿಂದ ಬಿಡಿಸುವ ಕುರಿತಂ ಸರ್ಕಾರ ಗಂಭೀರವಾಗಿ ಕ್ರಮ ಕೈಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ೧೯೮೧ರ ಜನಗಣತಿ ಪ್ರಕಾರ ಬಿಜಾಪುರ ಜನಸಂಖ್ಯೆ ೧,೪೬,೮೦೮ ಇರುತ್ತದೆ. ಈಗ ೧,೬೫,೦೦೦ ಇರುತ್ತದೆ. ಪ್ರಸ್ತುತ ಬಿಜಾಪುರ ನಗರಕ್ಕೆ ಭೂತನಾಳ ಕೆರೆಯಿಂದ ಮತ್ತು ಕೃಷ್ಣಾ ನದಿಯ ಬಲೂತಿ ಜಲಸ್ಥಾವರದಿಂದ ನೀರು ಸರಬರಾಜು ಮಾಡಲಾಗುತ್ತಿದೆ ಈ ನೀರು ಸರಬರಾಜಿನ ನಿರ್ವಹಣೆಯನ್ನು ನಗರ ಸಭೆ ನಿರ್ವಹಿಸುತ್ತಿದೆ. ಭೂತನಾಳ ಕೆರೆಯಿಂದ ದಿನಂ ಪ್ರತಿ ೧.೬ ದಶಲಕ್ಷ ಗ್ಯಾಲನ್ ನೀರು ಸರಬರಾಜು ಮಾಡುತ್ತಿದ್ದು, ಈಗ ೧.೮ ದಶಲಕ್ಷ ಗ್ಯಾಲನ್‌ಗಳಿಗೆ ಹೆಚ್ಚಿಸಲಾಗಿದೆ. ಬಲೂತಿ ನೀರು ಸ್ಥಾವರವು ಕೊಲ್ಲಾರ ಬ್ಯಾರೇಜಿನಿಂದ ಸುಮಾರು ೬ ಕಿ.ಮೀ. ಕೆಳ ಭಾಗದಲ್ಲಿರುವುದರಿಂದ, ಕೊಲ್ಲಾರ ಬ್ಯಾರೇಜಿನಿಂದ ಹಾಲಿ ಬಿಡುತ್ತಿದ್ದ ನೀರನ್ನು ಮಾರ್ಗ ಮಧ್ಯೆ ಇರತಕ್ಕ ಏತ ನೀರಾವರಿ ವ್ಯವಸಾಯಕ್ಕೆ ರೈತರು ಉಪಯೋಗಿಸುತ್ತಿದ್ದು, ಬಲೂತಿ ಜಲಸ್ಥಾವರದಲ್ಲಿ ನೀರಿನ ಕೊರತೆ ಉದ್ಭವಿಸಿದೆ. ಆದಕಾರಣ ಹಿಡ್‌ಕಲ್ ಜಲಾಶಯದಿಂದ ಘಟಪ್ರಭಾ ಎಡದಂಡೆ ನಾಲಾ ಮುಖಾಂತರ ೧೨೦ ಕ್ಯೂಸೆಕ್ಸ್ ನೀರನ್ನು ಕೊಲ್ಲಾರ ಬ್ಯಾರೇಜಿಗೆ ಬಿಡಲು ಏರ್ಪಾಡು ಮಾಡಲಾಗಿದೆ ಈಗ ನೀರು ಶೇಖರಣೆಯಾಗುತ್ತಿದೆ. ಈಗಾಗಲೇ ಒಂದು ಅಡಿ ಆರು ಅಂಗುಲ ನೀರು ಶೇಖರಣೆಯಾಗಿದೆ.

ಹಿಡಕಲ್ ಜಲಾಶಯದಿಂದ ಬಿಟ್ಟ ನೀರು ಕೊಲ್ಲಾರ ಬ್ಯಾರೇಜ್ ಕೆಳಗೆ ನದಿಗೂ ಸೇರುತ್ತಿದೆ. ಕೊಲ್ಲಾರ ಬ್ಯಾರೇಜಿಗೂ ಮತ್ತು ಬಲೂತಿ ನೀರು ಸ್ಥಾವರಕ್ಕೂ ಮಾರ್ಗ ಮಧ್ಯೆ ಹಲವಾರು ಮಡುಗಳಿದ್ದು, ಇವುಗಳು ತುಂಬಿಕೊಂಡಂ ಮುಂದೆ ನೀರು ಹರಿಯುವುದರಿಂದ ತಡವಾಗುತ್ತಿದೆ. ಆದಕಾರಣ ಬಲೂತಿ ನೀರು ಸ್ಥಾವರದವರೆಗೂ ಜಾಗ್ರತೆಯಾಗಿ ಸೇರಲು ಮಡುವಿನಿಂದ ಮಡುವಿಗೆ ನೀರನ್ನು ಪಂಪು ಮಾಡಲಾಗುತ್ತಿದೆ. ಪಂಪುಗಳನ್ನು ಮಂಡಲಿಯಿಂದ ನಗತ ಸಭೆಗೆ ಕೊಟ್ಟಿದೆ, ಬಲೂತಿ ನೀರು

ಸ್ಥಾವರದ ಕೆಳಭಾಗದಲ್ಲಿ ನೀರು ಕೆಳಗಡೆ ಹೋಗದಂತೆ ಒಂದು ಮಣ್ಣಿನ ಏರಿಯನ್ನು ಬುಲ್ಡೋಜರ್ ಸಹಾಯದಿಂದ ಹಾಕಲಾಗುತ್ತಿದೆ. ದಿನಾಂಕ ೩-೪-೮೫ರಿಂದ ಬಲೂತಿ ನೀರು ಸ್ಥಾವರದಿಂದ ದಿನಂಪ್ರತಿ ೧೨ ಲಕ್ಷ ಗ್ಯಾಲನ್ ನೀರನ್ನು ನಗರಕ್ಕೆ ಪಂಪು ಮಾಡಲಾಗುತ್ತಿದೆ. ಆದ್ದರಿಂದ ಕೊಯಿನ ಜಲಾಶಯದಿಂದ ನೀರು ತರುವ ಅಗತ್ಯವಿಲ್ಲ. ನಗರದ ರಾಫಿವೇಂದ್ರ ಕಾಲೋನಿ, ಸಂಗೊಳ್ಳಿರಾಯಣ್ಣ ಕಾಲೋನಿ, ಹುಡ್ಕೋ ಕಾಲೋನಿ, ಕೆ.ಇ.ಬಿ ಕಾಲೋನಿಗಳು ಎತ್ತರದ ಪ್ರದೇಶದಲ್ಲಿರುವುದರಿಂದ ಭೂತನಾಳ ಕೆರೆಯ ನೀರು ಇಲ್ಲಿಗೆ ತಲುಪುತ್ತಿಲ್ಲ. ಆದ್ದರಿಂದ ಆರು ಟ್ಯಾಂಕರ್‌ಗಳ ಮೂಲಕ ಸದರಿ ಕಾಲೋನಿಗಳಿಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಎರಡು ಟ್ಯಾಂಕರ್‌ಗಳನ್ನು ಮಂಡಲಿಯಿಂದ ನಗರಸಭೆಗೆ ಎರವಲು ಕೊಟ್ಟಿದೆ. ಇನ್ನೆರಡು ಟ್ಯಾಂಕರ್‌ಗಳನ್ನು ಕೊಡಲು ಭರವಸೆಯನ್ನು ಕೊಟ್ಟಿದೆ.

ಬಲೂತಿಯಿಂದ ನೀರನ್ನು ಪಂಪು ಮಾಡುತ್ತಿರುವುದರಿಂದ ಈ ಸಮಸ್ಯೆ ಬಹುಪಂಟ್ಟಿಗೆ ಪರಿಹಾರವಾಗಿದೆ. ಈ ಏರ್ಪಾಡಲ್ಲದೆ ನಗರದಲ್ಲಿ ಹಾಲಿ ೮೮ ಪಂಪುಗಳು ಕೆಲಸ ಮಾಡುತ್ತಿವೆ ಎಲ್ಲಾ ಪಂಪುಗಳು ಸುಸ್ಥಿತಿಯಲ್ಲಿರಲು ಮಂಡಲಿ ನಗರಸಭೆಗೆ ಸಹಾಯ ಮಾಡುತ್ತಿದೆ. ಏಳು ವಿದ್ಯುತ್‌ಚಾಲಿತ ಪಂಪುಗಳೂ ಕೂಡ ಕೊಳವೆ ಬಾವಿಗಳಿಂದ ನೀರನ್ನು ಸರಬರಾಜು ಮಾಡುತ್ತಿವೆ.

ಕ್ಷಾಮ ಪರಿಹಾರ ಕಾರ್ಯಕ್ರಮದಲ್ಲಿ ೧೯೮೩ ವಂತ್ತು ೮೪ರಲ್ಲಿ ೨೮ ಕೊಳವೆ ಬಾವಿಗಳನ್ನು ತೋಡಿದ್ದು ಇವುಗಳಲ್ಲಿ ೧೮ಕ್ಕೆ ಕೈಪಂಪುಗಳನ್ನು ಮತ್ತು ೩ಕ್ಕೆ ವಿದ್ಯುತ್ ಪಂಪ್‌ಗಳನ್ನು ಅಳವಡಿಸಿದ್ದು ನೀರು ಸರಬರಾಜು ಮಾಡಲಾತ್ತಿದೆ,

ಮೇಲ್ಕಂಡ ಎಲ್ಲಾ ಮೂಲಗಳಿಂದ ನಗರಕ್ಕೆ ದಿನಂಪ್ರತಿ ಮೂರು ದಶಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತದೆ. ಈಗ ಸುಮಾರು ದಿನಂಪ್ರತಿ ತಲಾ ಸರಾಸರಿ ೮೧ ಲೀಟರ್ ನೀರು ಸರಬರಾಜಾಗುತ್ತಿದೆ.

(iii) ಆಳಂದ್ ತಾಲ್ಲೂಕಿನ ಗ್ರಾಮಗಳಲ್ಲಿ ಅದರಲ್ಲಿಯೂ ಹರಿಜನರ ಕೇರಿಯಲ್ಲಿ ಕುಡಿಯಲಿವ ನೀರಿನ ಅಭಾವ

ಶ್ರೀ ಶರಣಬಸಪ್ಪ ಮಾಲಿ ಪಾಟೀಲ್.—ಅಧ್ಯಕ್ಷರೇ, ಗುಲ್ಬರ್ಗ ಜಿಲ್ಲೆಯ ಆಳಂದ್ ತಾಲ್ಲೂಕಿನ ಅನೇಕ ಗ್ರಾಮದಲ್ಲಿ ಅದರಲ್ಲೂ ವಿಶೇಷವಾಗಿ ಹರಿಜನಕೇರಿ ಹಾಗೂ ತಾಂಡಾಗಳಲ್ಲಿ ಕುಡಿಯುವ ನೀರಿನ ತೊಂದರೆ ಹೆಚ್ಚಾಗಿದ್ದು ಸದರಿ ನೀರಿನ ಬವಣೆಯನ್ನು ನಿವಾರಿಸಲು ಕೊಳವೇ ಬಾವಿಗಳನ್ನು ತೋಡಿಸುವುದು ಹಾಗೂ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲು ಕೂಡಲೇ ಕ್ರಮ ಕೈಕೊಳ್ಳುವ ವಿಚಾರ.

ಶ್ರೀ ಎ. ಲಕ್ಷ್ಮೀಸಾಗರ್. —ಸನ್ಮಾನ್ಯ ಸದಸ್ಯರು ೩-೪ ದಿವಸಗಳಿಂದ ಪ್ರಸ್ತಾಪ ಮಾಡುತ್ತಿದ್ದಾರೆ. ನಾನು ಅವರಿಗೆ ಸಂಪೂರ್ಣವಾದ ವಿವರ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಅವರು ಕೇಳಿದ್ದುದು ಅರ್ಬನ್‌ದು ಅಲ್ಲ. ಅವರು ರೂರಲ್ ವಿಷಯ ಕೇಳುತ್ತಿದ್ದಾರೆ. ಹರಿಜನಕೇರಿ ಮತ್ತು ತಾಂಡಾಗಳದ್ದು ಅವರು ಕೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ ಖಾರ್ಗೆ,—ಅವರು ತಾಂಡಾಗಳ ವಿಷಯ ಕೇಳುತ್ತಿದ್ದಾರೆ. ಇವತ್ತು ಅನೇಕ ಕಡೆ ಇಂತಹ ಪರಿಸ್ಥಿತಿ ಇದೆ. ನನ್ನ ಜಿಲ್ಲೆಯಲ್ಲಿ ನೀರು ಇಲ್ಲ.

ಶ್ರೀ ಆರ್. ವೆಂಕರಾಮಯ್ಯ.—ಅಧ್ಯಕ್ಷರೆ, ನಮ್ಮ ....

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ನಮಗೆ ಇನ್ನೂ ಉತ್ತರ ಬಂದಿಲ್ಲವಲ್ಲ ಅಧ್ಯಕ್ಷರೇ, ಹಾಗೇ ಮುಂದಿನವರ ವಿಷಯಕ್ಕೆ ಹೋದರೆ ಹೇಗೆ ?

ಶ್ರೀ ಧರ್ಮಸಿಂಗ್.—ನಿಯಮ ೩೫೪ ರ ಕೆಳಗೆ ನಾವು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ, ಇವತ್ತು ಮಾನ್ಯ ಸದಸ್ಯರು ಗುಲ್ಬರ್ಗ ಜಿಲ್ಲೆಯ ಆಳಂದ್ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ನೀರಿನ ತೊಂದರೆ ಇರುವ ಬಗ್ಗೆ ಹೇಳುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಕೊಡಬೇಕಾಗುತ್ತದೆ. ಅವರೇ ಇಲ್ಲಿ ಇಲ್ಲದಿದ್ದ ಮೇಲೆ ಕೇಳತಕ್ಕದ್ದಕ್ಕೆ ಅರ್ಥವಿಲ್ಲದಿದ್ದಕ ಇದನ್ನು